ಇದರೊಂದಿಗೆ 70 ಅಡಿ ಎತ್ತರದ ಅಟ್ಟಣಿಗೆ ಜತೆಗೆ 5,500 ಜನರು ಆಸೀನರಾಗುವಂತೆ 5 ಸಾವಿರ ಚದರ ಅಡಿ ವಿಸ್ತೀರ್ಣದ ಪ್ರೇಕ್ಷಕರ ಗ್ಯಾಲರಿ ಸಿದ್ಧಗೊಂಡಿದೆ. ವಿಂಧ್ಯಗಿರಿ ಬೆಟ್ಟವೇರಿದ ನಂತರ ಬಾಹುಬಲಿ ಶಿರಭಾಗದಿಂದ ಮಹಾಮಜ್ಜನ ನೆರವೇರಿಸಲು ಅಟ್ಟಣಿಗೆ ಏರಲು ಎರಡೂ ಕಡೆ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಗಣ್ಯರು, ಅಂಗವಿಕಲರು, ವೃದ್ಧರನ್ನು ಗೊಮ್ಮಟನ ಶಿರಭಾಗಕ್ಕೆ ಎತ್ತೊಯ್ಯಲು ಮತ್ತು ಸರಕು, ಪೂಜಾ ಸಾಮಗ್ರಿಗಳನ್ನು ಸಾಗಿಸಲು ಮೂರು ಲಿಫ್ಟ್ ಅಳವಡಿಸಲಾಗಿದೆ.

12 ತಾತ್ಕಾಲಿಕ ಉಪ ನಗರಗಳು: ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಭಕ್ತರು, ಯಾತ್ರಾರ್ಥಿಗಳಿಗೆ ವಸತಿ ಸೌಕರ್ಯ ಕಲ್ಪಿಸುವ ಸಲುವಾಗಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ರೂ.90 ಕೋಟಿ ವೆಚ್ಚದಲ್ಲಿ ಒಟ್ಟು 12 ತಾತ್ಕಾಲಿಕ ಉಪನಗರಗಳನ್ನು ಸುವ್ಯವಸ್ಥಿತವಾಗಿ ನಿರ್ಮಿಸಿದೆ. ಈ ಉಪ ನಗರಗಳಲ್ಲಿ 26 ಸಾವಿರ ಜನರಿಗೆ ಇಲ್ಲಿನ ಮನೆಗಳು ಆಶ್ರಯ ನೀಡಲಿವೆ. ಫೆ. 7 ರಿಂದ 26ರವರೆಗೆ ಮಹೋತ್ಸವ ನಡೆಯುವ ದಿನಗಳಲ್ಲಿ ಒಬ್ಬ ವ್ಯಕ್ತಿ ಒಂದು ದಿನ ಮಾತ್ರ ತಂಗಿದರೆ ಅವರಿಗೆ ಮಾಡುವ ವಾಸ್ತವ್ಯದ ವೆಚ್ಚ ರೂ.1500 ಆಗಲಿದೆ. ಉಪನಗರ ನಿರ್ಮಾಣ, ವಾಹನಗಳ ನಿಲುಗಡೆ, ಇತರೆ ನಾಗರಿಕ ಸೌಲಭ್ಯಕ್ಕಾಗಿ ಶ್ರವಣಬೆಳಗೊಳ ಬೆಟ್ಟದ ಸುತ್ತಮುತ್ತ 494.19 ಎಕರೆ ಭೂಮಿಯನ್ನು ತಾತ್ಕಾಲಿಕವಾಗಿ ಸ್ವಾಧೀನ ಮಾಡಿಕೊಂಡು, ಎಕರೆಗೆ ಎರಡು ಬೆಳೆ ಸೇರಿ ರೂ.36 ಸಾವಿರ ಪರಿಹಾರವನ್ನು ಕೂಡ ರೈತರಿಗೆ ನೀಡಲಾಗಿದೆ.

ಹೆಲಿಟೂರಿಸಂ, ಬೈಕ್ ಸವಾರಿ: ದೇಶ, ವಿದೇಶಗಳಿಂದ ಆಗಮಿಸುವ ಪ್ರವಾಸಿಗರು, ಯಾತ್ರಾರ್ಥಿಗಳು, ಭಕ್ತರಿಗೆ ಜಿಲ್ಲೆಯ ಪ್ರವಾಸಿ ತಾಣಗಳ ದರ್ಶನ ಮಾಡಿಸಲು ಹೆಲಿಟೂರಿಸಂ, ಬೈಕ್ ಸವಾರಿ, ಜಲ ಸಾಹಸ ಕ್ರೀಡೆ ಪರಿಚಯಿಸುತ್ತಿರುವುದು ಮತ್ತೊಂದು ವಿಶೇಷ.

ಮಹಾಮಜ್ಜನ ಕಣ್ತುಂಬಿಕೊಳ್ಳಲು ಹೆಲಿಟೂರಿಸಂ ವರದಾನವಾಗಲಿದೆ. ರೂ.2100ಕ್ಕೆ ವಿಂಧ್ಯಗಿರಿಯ ಸುತ್ತ ಹತ್ತು ನಿಮಿಷ ಹೆಲಿಕಾಪ್ಟರ್‌ನಲ್ಲಿ ಸುತ್ತಾಡಬಹುದು. ಬಾಹುಬಲಿ ಮೂರ್ತಿಯಿಂದ 200 ಮೀಟರ್ ಅಂತರದಲ್ಲಿ ಹೆಲಿಕಾಪ್ಟರ್‌ಗಳು ಹಾರಾಟ ನಡೆಸಲಿವೆ. ಅದಕ್ಕಿಂತ ಹತ್ತಿರ ಬರಲು ಅವಕಾಶವಿಲ್ಲ. ಜತಗೆ ಹೆಲಿಕಾಪ್ಟರ್ ಮೂಲಕ ಹೂವಿನ ಮಳೆ ಸುರಿಸುವಂತಹ ಕಾರ್ಯಗಳಿಗೆ ಅವಕಾಶ ಇಲ್ಲ.

ಮೋಟರ್ ಬೈಕ್ ಸವಾರಿ: ಜೈನ ಬಸದಿಗಳು ಹಾಗೂ ಜಿಲ್ಲೆಯ ಪ್ರಮುಖ ಪ್ರವಾಸಿ ಸ್ಥಳಗಳಿಗೆ ಮೋಟರ್ ಬೈಕ್‌ಗಳಲ್ಲಿ ಸವಾರಿ ಹೋಗಬಹುದು. ದ್ವಿಚಕ್ರ ವಾಹನವನ್ನು ತೆಗೆದುಕೊಳ್ಳಬಹುದು. ಪೆಟ್ರೋಲ್ ವೆಚ್ಚವನ್ನು ಸವಾರರೇ ಭರಿಸಬೇಕು. ವಾಹನಕ್ಕೆ ಜಿಪಿಎಸ್ ಅಳವಡಿಸಲಾಗಿರುತ್ತದೆ.

ಸುತ್ತಮುತ್ತ ಜೈನ ಬಸದಿಗಳು ಇರುವ ಜಿನ್ನನಾಥಪುರ, ಹಳೇಬೆಳಗೊಳ, ಬಸ್ತಿಹಳ್ಳಿ, ಬೆಕ್ಕ, ನುಗ್ಗೇಹಳ್ಳಿ, ಕಂಬದಹಳ್ಳಿ, ಶಾಂತಿಗ್ರಾಮ, ಹಳೇಬೀಡು, ಮೇಲುಕೋಟೆ ಜತೆಗೆ ಪ್ರವಾಸಿ ಸ್ಥಳಗಳಾದ ಬೇಲೂರು, ಹಳೇಬೀಡು, ಸಕಲೇಶಪುರ, ಬಿಸಿಲೆ ಘಾಟ್ ಗಳನ್ನು ಪಟ್ಟಿ ಮಾಡಲಾಗಿದೆ. ಈ ಸ್ಥಳಗಳ ಬಗ್ಗೆ ಮಾಹಿತಿಯನ್ನು ಕಿರುಹೊತ್ತಿಗೆಯಲ್ಲಿ ಮುದ್ರಿಸಿ ಪ್ರವಾಸಿಗರಿಗೆ ನೀಡಲಾಗುತ್ತದೆ.

ಪ್ರೇಕ್ಷಣೆಯ ಸ್ಥಳಗಳ ವೀಕ್ಷಣೆಗೆ ಮೊಬೈಲ್ ಆ್ಯಪ್ ಆಧರಿತ ಸೇವಾ ಕಂಪೆನಿಗಳಾದ ಓಲಾ, ಉಬರ್ ಕ್ಯಾಬ್ ಸೇವೆ ಬಳಸಿಕೊಳ್ಳಲಾಗುತ್ತಿದೆ. .

ಹೈಟೆಕ್ ತ್ಯಾಜ್ಯ ಸಂಸ್ಕರಣಾ ಘಟಕ: ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ಹೋಬಳಿ ಮಟ್ಟದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಒಳಚರಂಡಿ ಸಂಸ್ಕರಣಾ ಘಟಕ ಸ್ಥಾಪಿಸಲಾಗಿದೆ.

3ಡಿ ತಂತ್ರಜ್ಞಾನದ ವರ್ಚ್ಯುವಲ್ ಕನ್ನಡಕ: ಮಹೋತ್ಸವದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಧಾರ್ಮಿಕ ಕಾರ್ಯಕ್ರಮಕ್ಕೆ 3ಡಿ ಆಯಾಮದ ತಂತ್ರಜ್ಞಾನ ಅಳವಡಿಸಲಾಗಿದೆ. ಮಹಾಮಜ್ಜನದ ಅದ್ಭುತ ದೃಶ್ಯಗಳನ್ನು ವರ್ಚ್ಯುವಲ್ ರಿಯಾಲಿಟಿ (ವಿಆರ್) ಮಾದರಿಯಲ್ಲಿ ನೇರ ಪ್ರಸಾರ ಮಾಡಲಾಗುತ್ತಿದೆ. ಸ್ಮಾರ್ಟ್ ಫೋನ್ನಲ್ಲಿ ಸ್ಕ್ಯಾನ್ ಮಾಡಿ ವಿಆರ್ ಕನ್ನಡಕಗಳ ಮೂಲಕ ಮಸ್ತಕಾಭಿಷೇಕದ ನೇರ ಪ್ರಸಾರ ವೀಕ್ಷಿಸಬಹುದು.

ವಿಂಧ್ಯಗಿರಿ ಬೆಟ್ಟದಲ್ಲಿ 58 ಅಡಿ ಎತ್ತರದ ಗೊಮ್ಮಟೇಶ್ವರ ಏಕಶಿಲಾ



12 ವರ್ಷಗಳ ಬಳಿಕ ನಡೆಯುತ್ತಿರುವ, ದೇಶ, ವಿದೇಶಗಳ ಭಕ್ತರನ್ನು ಸೆಳೆಯುವ ಗೊಮ್ಮಟೇಶ್ವರನ ಮಹಾಮಸ್ತಕಾಭಿಷೇಕಕ್ಕೆ ಕರ್ನಾಟಕ ಸರ್ಕಾರದಿಂದ ಎಲ್ಲ ರೀತಿಯ ನೆರವು ಮತ್ತು ಸಂಪೂರ್ಣ ಸಹಕಾರವನ್ನು ನೀಡುತ್ತಿದ್ದೇವೆ. ಈ ಸಲ ಕೇಂದ್ರ ಸರ್ಕಾರದಿಂದ ಯಾವುದೇ ನೆರವು ಸಿಗದಿದ್ದರೂ ಎಲ್ಲಿಯೂ ಕೊರತೆಯಾಗದಂತೆ ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ.

**-ಸಿದ್ದರಾಮಯ್ಯ, ಮುಖ್ಯಮಂತ್ರಿ**



## ಮಹಾಮಜ್ಜನದ ಹಿನ್ನೋಟ

ಬಾಹುಬಲಿಗೆ 1910, 1925, 1940, 1953, 1967, 1981 ಹಾಗೂ 1993ರಲ್ಲಿ ಮಹಾಮಜ್ಜನ ನಡೆದಿತ್ತು. 1940ರಲ್ಲಿ ನಡೆದ ಮಹಾಮಸ್ತಕಾಭಿಷೇಕ ಸಂದರ್ಭದಲ್ಲಿ ಮೈಸೂರಿನ ಅರಸರಾಗಿದ್ದ ಕೃಷ್ಣರಾಜ ಒಡೆಯರು ಅಂದಿನ ಯುವರಾಜ ಜಯಚಾಮರಾಜೇಂದ್ರ ಒಡೆಯರೊಂದಿಗೆ ಶ್ರವಣಬೆಳಗೊಳಕ್ಕೆ ಆಗಮಿಸಿ ಮಹೋತ್ಸವದಲ್ಲಿ ಪಾಲ್ಗೊಂಡಿದ್ದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಮೊದಲ ಬಾರಿಗೆ ಗೊಮ್ಮಟಮೂರ್ತಿಗೆ ವಿದ್ಯುತ್ ಬೆಳಕಿನ ವ್ಯವಸ್ಥೆಯನ್ನು ಮೈಸೂರು ಒಡೆಯರು ಮಾಡಿದ್ದು ಅಂದಿನ ವೈಶಿಷ್ಟ್ಯಗಳಲ್ಲೊಂದು.

1981ರ ಮಹೋತ್ಸವವು ಮೂರ್ತಿ ಪ್ರತಿಷ್ಠಾಪನೆಯ ಸಾವಿರ ವರ್ಷದ ನೆನಪಿನಲ್ಲಿ ನಡೆದಾಗ ಪ್ರಧಾನಿ ಇಂದಿರಾಗಾಂಧಿ ಪಾಲ್ಗೊಂಡು ಗೌರವ ಅರ್ಪಿಸಿದ್ದರು. 1993ರಲ್ಲಿ ಜರುಗಿದ 20ನೇ ಶತಮಾನದ ಕೊನೆಯ ಮಹೋತ್ಸವದಲ್ಲಿ ರಾಷ್ಟ್ರಪತಿ ಶಂಕರದಯಾಳ್ ಶರ್ಮ, ಪ್ರಧಾನ ಮಂತ್ರಿ ಪಿ.ವಿ.ನರಸಿಂಹರಾವ್ ಪಾಲ್ಗೊಂಡು ಶ್ರವಣಬೆಳಗೊಳದಲ್ಲಿ ದಕ್ಷಿಣ ಭಾರತದ ಪ್ರಥಮ ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಉದ್ಘಾಟಿಸಿದ್ದರು.